# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಗ್ರಾಮೀಣ ಕ್ರೀಡೋತ್ಸವ ಕಾರ್ಯಕ್ರಮದ ಮಾರ್ಗಸೂಚಿ ಪರಿಷ್ಕರಿಸುವ ಕುರಿತು.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ:ಯುಸೇಇ 178 ಯುಸೇಕ್ರೀ 2014, ದಿನಾಂಕ:16.06.2014

2. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ:ಯುಸಕ್ರೀಇ/ಕ್ರೀಕಪಂ/ಗ್ರಾಕ್ರೀ/10/2017-18, ದಿನಾಂಕ:27.04.2017.

******

**ಪ್ರಸ್ತಾವನೆ:**

ಮೇಲೆ .ಓದಲಾದ (1)ರ ಸರ್ಕಾರದ ಆದೇಶದನ್ವಯ ರಾಜ್ಯದ ಗ್ರಾಮೀಣ ಪಾರಂಪರಿಕ ಹಾಗೂ ಜಾನಪದ ದೇಸೀ ಕ್ರೀಡೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ತಾಲ್ಲೂಕು ಮಟ್ಟದಲ್ಲಿ **"ಗ್ರಾಮೀಣ ಕ್ರೀಡೋತ್ಸವ"** ಯೋಜನೆಯನ್ನು ಜಾರಿಗೆ ತರಲಾಗಿದೆ. ಮೇಲೆ ಓದಲಾದ (2)ರ ದಿನಾಂಕ: 27.04.2017ರ ಪತ್ರದಲ್ಲಿ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಕಳೆದ ಮೂರು ವರ್ಷಗಳ ಅನುಭವ ಹಾಗೂ ವಿವಿಧ ಜಿಲ್ಲೆಗಳಿಂದ ಸ್ವೀಕರಿಸಿದ ಅಭಿಪ್ರಾಯಗಳ ಆಧಾರದಲ್ಲಿ ಕಾರ್ಯಕ್ರಮವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸರ್ಕಾರದಿಂದ ಅನುಮೋದನೆಗೊಂಡಿರುವ ಮಾರ್ಗಸೂಚಿಗಳಿಗೆ ತಿದ್ದುಪಡಿ ಮಾಡುವುದು ಅವಶ್ಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಾನ್ಯ ಮೀನುಗಾರಿಕೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ 2017-18ನೇ ಸಾಲಿನಿಂದ ಗ್ರಾಮೀಣ ಕ್ರೀಡೋತ್ಸವ ಕಾರ್ಯಕ್ರಮದ ಮಾರ್ಗಸೂಚಿಗಳನ್ನು ಪರಿಷ್ಕರಿಸಲು ತೀರ್ಮಾನಿಸಲಾಗಿದ್ದು, ಅದರಂತೆ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 155 ಯುಸೇಕ್ರೀ 2017
## ಬೆಂಗಳೂರು, ದಿನಾಂಕ:23.05.2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 178 ಯುಸೇಕ್ರೀ 2014, ದಿನಾಂಕ:16.06.2014ರಲ್ಲಿ ಹೊರಡಿಸಲಾದ **"ಗ್ರಾಮೀಣ ಕ್ರೀಡೋತ್ಸವ"** ಕಾರ್ಯಕ್ರಮದ ಮಾರ್ಗಸೂಚಿಯನ್ನು ಈ ಕೆಳಕಂಡ ಅಂಶಗಳಿಗೆ ಸಂಬಂಧಿಸಿದಂತೆ ಪರಿಷ್ಕರಿಸಿ ಆದೇಶಿಸಿದೆ.

1. **ಉದ್ದೇಶ:**

   ಅ) ರಾಜ್ಯದ ಗ್ರಾಮೀಣ ಭಾಗದಲ್ಲಿ ಕ್ರೀಡಾ ಸಂಸ್ಕೃತಿ ಮತ್ತು ಕ್ರೀಡಾ ಬೆಳವಣಿಗೆಗೆ ಪೂರಕವಾದ ವಾತಾವರಣ ನಿರ್ಮಿಸುವುದು.

2. **ರೂಪುರೇಷೆ:**

   ಆ) ಕನಿಷ್ಠ ಒಂದು ಕ್ರೀಡೆಯನ್ನು ಆಯೋಜನೆ ಮಾಡಬೇಕು.

   ಇ) ವರ್ಷ: ಆರ್ಥಿಕ ವರ್ಷ

--2

3. **ಕ್ರೀಡೆ:** ಈ ಆದೇಶದ ಅನುಬಂಧದಲ್ಲಿ ಕಾಣಿಸಿರುವ ಕ್ರೀಡೆಗಳು ಮತ್ತು ಈಗಾಗಲೇ ದಿನಾಂಕ16.06.2014ರ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿದ ಕ್ರೀಡೆಗಳು.

4. **ಸಂಘ/ಸಂಸ್ಥೆಗಳ ಆಯ್ಕೆ ವಿಧಾನ:**
   ಅ) ಆಯ್ಕೆ ಸಮಿತಿಯನ್ನು ಕೈಬಿಡಲಾಗಿದ್ದು, ಜಿಲ್ಲೆಯ ಉಪ/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಆಯ್ಕೆ ಮಾಡುವುದು.
   ಆ) ಈಗಾಗಲೇ ಸಂಘಟನಾ ಅನುಭವ ಹೊಂದಿರುವಂತಹ ಸಂಘ ಸಂಸ್ಥೆಗಳನ್ನು ಆಯ್ಕೆ ಮಾಡುವುದು.
   ಇ) ಉಪ/ಸಹಾಯಕ ನಿರ್ದೇಶಕರಿಗೆ ಸಂಘಟನಾ ಪೂರ್ವ ಪ್ರಸ್ತಾವನೆ ಸಲ್ಲಿಸುವುದು.
   ಈ) ಕಾರ್ಯಕ್ರಮ ಸಂಘಟಿಸಿದ ನಂತರ ವರದಿ, ಉಪಯೋಗಿತಾ ಪತ್ರ ಭಾವಚಿತ್ರಗಳೊಂದಿಗೆ ಕಡ್ಡಾಯವಾಗಿ ದೃಢೀಕರಣ ಮಾಡಿ ಸಲ್ಲಿಸುವುದು.

5) **ಅನುದಾನ ವಿವರ:**
   ಅ) ಪ್ರತಿ ಕಾರ್ಯಕ್ರಮಕ್ಕೆ ಗರಿಷ್ಠ ರೂ.50,000/–ಗಳನ್ನು ಇಲಾಖೆಯಿಂದ ಒದಗಿಸಲಾಗುವುದು. ಈ ಮೊತ್ತವನ್ನು ಕಾರ್ಯಕ್ರಮದ ಆಯೋಜನೆಗೆ ಭರಿಸಿದ ವೆಚ್ಚದಲ್ಲಿ ಶೇ.50% ರಷ್ಟು ಅಥವಾ ಗರಿಷ್ಠ ರೂ.50,000/– ಮಿತಿಗೊಳಪಟ್ಟು ಯಾವುದು ಕಡಿಮೆಯೋ ಅದನ್ನು ಅನುದಾನವಾಗಿ ಒದಗಿಸಲಾವುದು.

6) **ಘಟಕ ವೆಚ್ಚ:**
   ಅ) ಗರಿಷ್ಠ ರೂ.50,000/– (ರೂಪಾಯಿ ಐವತ್ತು ಸಾವಿರ ಮಾತ್ರ)ಗಳನ್ನು ಪ್ರತಿ ತಾಲ್ಲೂಕಿನ ಕನಿಷ್ಠ ಮೂರು ಸಂಘ/ಸಂಸ್ಥೆಗಳಿಗೆ ಒದಗಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಆರ್.ಪ್ರಭುಶಂಕರ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು,(ಎ ಮತ್ತು ಇ), ಕರ್ನಾಟಕ, ಅಂಚೆ ಪೆಟ್ಟಿಗೆ ಸಂಖ್ಯೆ–5329, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು, (ಜಿ & ಎಸ್.ಎಸ್.ಎ), ಕರ್ನಾಟಕ, ಅಂಚೆ ಪೆಟ್ಟಿಗೆ ಸಂಖ್ಯೆ–5398, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು, (ಇ & ಆರ್.ಎಸ್.ಎ), ಕರ್ನಾಟಕ, ಅಂಚೆ ಪೆಟ್ಟಿಗೆ ಸಂಖ್ಯೆ–5398, ಬೆಂಗಳೂರು.
4. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

––3

5. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಮಾನ್ಯ ಯುವಜನ ಸೇವಾ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
9. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**<u>ಸರ್ಕಾರದ ಆದೇಶ ಆದೇಶ ಸಂಖ್ಯೆ: ಯುಸೇಇ 155 ಯುಸೇಕ್ರೀ 2017, ದಿನಾಂಕ:23.05.2017ಕ್ಕೆ ಅನುಬಂಧ</u>**

1) ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆ
2) ಕುಸ್ತಿ ಸ್ಪರ್ಧೆ
3) ಕಬಡ್ಡಿ ಸ್ಪರ್ಧೆ
4) ವಾಲಿಬಾಲ್ ಸ್ಪರ್ಧೆ
5) ಖೋ-ಖೋ ಸ್ಪರ್ಧೆ
6) ಬಾರುಕೋಲು ರಹಿತ ಎತ್ತಿನಗಾಡಿ ಸ್ಪರ್ಧೆ

(ಆರ್.ಪ್ರಭುಶಂಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.